**ಜೈನ್ ಕಾಲೇಜಿನ ಕನ್ನಡಹಬ್ಬದಲ್ಲಿ ಕೋಗಿಲೆಯು 'ಪಲ್ಲವಿ'ಸಿದಾಗ...**

**ದೀಪವು ನಿನ್ನದೆ, ಗಾಳಿಯು ನಿನ್ನದೆ, ಆರದಿರಲಿ ಬೆಳಕು...** ಎಂದು ತಮ್ಮದೇ ಧಾಟಿಯಲ್ಲಿ ಶ್ರೀಮತಿ ಎಂ ಡಿ ಪಲ್ಲವಿ ತಮ್ಮ ಭಾವ ಗಾನಸಿರಿಯನ್ನು ಹೊಮ್ಮಿಸಿದಾಗ, ನೆರೆದಿದ್ದ ಪ್ರೇಕ್ಷಕರ ಮನದಲ್ಲಿ ಕನ್ನಡ ನಂದಾದೀಪವು ಬೆಳಗಿತು. ಅಂದಹಾಗೆ ಇದು, ಕನ್ನಡ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಒಲವು ಮೂಡಿಸುವ ಸಲುವಾಗಿ ಜೈನ್ ಕಾಲೇಜು, ವಿ ವಿ ಪುರಂ ಹಮ್ಮಿಕೊಂಡಿದ್ದಂತಹ ಕನ್ನಡಹಬ್ಬ ಕಾರ್ಯಕ್ರಮದಲ್ಲಿ ಕಂಡುಬಂದ ದೃಶ್ಯಕಾವ್ಯವಿದು.

**"ಕಾಲೇಜಿಗಳಲ್ಲಿ ಸಾಂಸ್ಕೃತಿಯ ಕಾರ್ಯಕ್ರಮುಗಳು ನಡೆಯುತ್ತಿರಬೇಕು. ಭಾಷೆಯ ಬಗ್ಗೆ ಪ್ರೀತಿ ಇರುವಂತಹ, ಕಾರ್ಯಕ್ರಮುಗಳು ನಡೆಯುತ್ತಿರಬೇಕು. ಇಂತಹ ಕಾರ್ಯಕ್ರಮುಗಳು "ಕಲೆಯ ಸಂಭ್ರಮಾಚರಣೆ"ಯಾಗಿ ರೂಪುಗೊಳ್ಳಬೇಕು"** ಎಂದು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದಂತಹ ಖ್ಯಾತ ಗಾಯಕಿ, ನಟಿ, ರಂಗಕರ್ಮಿ ಶ್ರೀಮತಿ ಎಂ.ಡಿ. ಪಲ್ಲವಿಯವರು ಹೇಳಿದರು.

**"ಸತತ ಅಭ್ಯಾಸ ಒಂದೇ ಯಶಸ್ಸಿಗೆ ಮೂಲಮಂತ್ರ. ಈ ಕಲೆಯ ಪಯಣ ದೀರ್ಘಾವಧಿ ಮ್ಯಾರಥಾನ್ ಇದ್ದಹಾಗೆ. ನೂರು ಮೀಟರ್ ರೇಸ್ ನ ತರಹ ಐದು ಸೆಕೆಂಡ್ ನಲ್ಲಿ ಜನಪ್ರಿಯವಾಗಬೇಕು, ಐದು ಸೆಕೆಂಡ್ ನಲ್ಲಿ ಶಾಶ್ವತವಾಗಿ ಇತಿಹಾಸದಲ್ಲಿ ಸೇರಿಕೊಳ್ಳಬೇಕು ಅಂತ ಎದುರು ನೋಡಬೇಡಿ. ನಿರಂತರ ಅಭ್ಯಾಸ ನಿಮಗೆ ಸಿಗಬೇಕಾದ ಮನ್ನಣೆಯನ್ನ ಸರಿಯಾದ ಸಮಯದಲ್ಲಿ ದಕ್ಕಿಸಿಕೊಡುತ್ತದೆ"** ಎಂದು ಎಲೆಮರೆಯ ಯುವಕೋಗಿಲೆಗಳಿಗೆ ತಮ್ಮ ಕಿವಿಮಾತನ್ನು ಸಹ ಹೇಳಿದರು.

ಒಂದೇ ವೇದಿಕೆಯ ಮೇಲೆ ಸುಮಾರು ೫೦ ವಿದ್ಯಾರ್ಥಿಗಳು ಕನ್ನಡ ನಾಡಗೀತೆಯನ್ನು ನಿನಾದಿಸಿ, ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ನೀಡಿದರಲ್ಲದೆ, ಭಾವಗೀತಾ ಗಾಯನ, ಸಿನೆಮಾ ಗಾಯನ, ಭರತನಾಟ್ಯ, ಕಥಕ್ ನೃತ್ಯ ಮತ್ತು ವಾದ್ಯವೃಂದ ಕಾರ್ಯಕ್ರಮಗಳು ಪ್ರೇಕ್ಷಕರ ಮನಸ್ಸನ್ನು ಸೆಳೆಯುವಲ್ಲಿ ಯಶಸ್ವಿಯಾದವು.

**"ನಮ್ಮ ಭಾಷಾಭಿಮಾನವನ್ನು ವ್ಯಕ್ತಪಡಿಸಲಿಕ್ಕೆ ಕನ್ನಡಹಬ್ಬ ನಿಜಕ್ಕೂ ಒಂದು ಉತ್ತಮ ವೇದಿಕೆಯಾಗಿದೆ. ನಮ್ಮ ಅಭಿಮಾನಕ್ಕೆ ಕ್ರಿಯಾತ್ಮಕ ರೂಪವನ್ನು ಕೊಟ್ಟು ಪ್ರೇಕ್ಷಕರನ್ನ ರಂಜಿಸುವುದು ನಮ್ಮ ಉದ್ದೇಶವಾಗಿತ್ತು"** ಎಂದು ಜೈನ್ ಕಾಲೇಜಿನ ಕನ್ನಡ ವಿಭಾಗದ ವಿದ್ಯಾರ್ಥಿ ವಿವೇಕ್ ತನ್ನ ಮನದಾಳದ ಮಾತನ್ನು ಹಂಚಿಕೊಂಡನು.

ಕಾರ್ಯಕ್ರಮದಲ್ಲಿ ಡಾ.ಬಿ.ಟಿ.ವೆಂಕಟೇಶ್, ನಿರ್ದೇಶಕರು, ಪಿ ಯು ಪ್ರೋಗ್ರಾಮ್, ಜೆಜಿಐ ಗ್ರೂಪ್, ಡಾ. ಎಸ್ ಎನ್ ನಟರಾಜ್, ಪ್ರಾಂಶುಪಾಲರು, ಜೈನ್ ಕಾಲೇಜು, ವಿ ವಿ ಪುರಂ, ಮೊದಲಾದವರು ಉಪಸ್ಥಿತರಿದ್ದರು.